05.10.2021. ಸಿ.ಸಿ.ನಂಃ1038/2020

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಳಲ್ಕೆರೆ.

ಸಿ ಸಿ ನಂಃ 1038/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ಶಿಲ್ಪಾ | | ಪಿ.ಡಬ್ಲ್ಯೂ | : 2 |
| ಗಂಡನ ಹೆಸರು | : ದೇವೇಂದ್ರಪ್ಪ | | ಸಿ.ಡಬ್ಲ್ಯೂ | : 2 |
| ವಯಸ್ಸು | : 28 ವರ್ಷ | | ದಿನಾಂಕ | : 05.10.2021 |
| ಉದ್ಯೋಗ | : ಮನೆ ಕೆಲಸ . | | | |
| ವಾಸಸ್ಥಳ | : ಬಿದರಕೆರೆ ಗ್ರಾಮ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನ್ಯಾಯಾಲಯದ ಮುಂದೆ ಈ ದಿನ ಹಾಜರಿರುವ ಆರೋಪಿತರು ಯಾರು ಎಂಬುದು ನನಗೆ ಗೊತ್ತು. ಅದೇ ರೀತಿ ನ್ಯಾಯಾಲಯದ ಮುಂದೆ ಗೈರು ಹಾಜರಿರುವ 2,3 ಮತ್ತು 6 ನೇ ಆರೋಪಿತರು ಸಹಾ ನನಗೆ ಗೊತ್ತು. ಚಾಸಾ–1. 3 ರಿಂದ 5 ಸಹಾ ನನಗೆ ಗೊತ್ತು. ಚಾಸಾ–1 ನನ್ನ ಗಂಡ.

ದಿಃ05.08.2012 ರಂದು ಆರೋಪಿತರು ಮತ್ತು ನಮ್ಮ ನಡುವೆ ನಲ್ಲಿ ಗುಂಡಿಯ ವಿಚಾರದಲ್ಲಿ ಗಲಾಟೆ ನೆಡೆದಿರುತ್ತದೆ. 1 ನೇ ಆರೋಪಿಯು ಚಾಸಾ–1 ರ ತಲೆಯ ನೆತ್ತಿಯ ಭಾಗಕ್ಕೆ ಕುಡಗೋಲಿನಿಂದ ಹೊಡೆದಿರುತ್ತಾರೆ. ಸದರಿ ಗಲಾಟೆಯಲ್ಲಿ ಚಾಸಾ–3 ರ ಸರವನ್ನು ಕಿತ್ತುಕೊಂಡಿರುತ್ತಾರೆ. ದಿಃ06.08.2012 ರಂದು ಬೆಳಿಗ್ಗೆ ಆರೋಪಿತರ ವಿರುದ್ಧ ದೂರು ಸಲ್ಲಿಸಿರುತ್ತೇವೆ. ಸದರಿ ಗಲಾಟೆಯಲ್ಲಿ ಆರೋಪಿತರು 1 ರಿಂದ 3 ನೇ ಆರೋಪಿತರು ನನಗೆ ಕಣಿಗೆಯಿಂದ ಹೊಡೆದಿರುತ್ತಾರೆ. ಚಾಸಾ–3 ರವರು ಚಾಸಾ–1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತಾರೆ. ಈ ಸಂಬಂಧ ನಾನು ಪೊಲೀಸರಿಗೆ ನನ್ನ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ

ನಾನು ನನ್ನ ಹೇಳಿಕೆಯಲ್ಲಿ ನಮಗೂ ಮತ್ತು 1 ನೇ ಆರೋಪಿತನಿಗೂ ಹಲವು

ವರ್ಷಗಳಿಂದ ಜಮೀನಿನ ವಿಚಾರದಲ್ಲಿ ವೈಮನಸ್ಸು ಇತ್ತು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯು ರಾತ್ರಿ 08.15 ರ ಸಮಯದಲ್ಲಿ ನಡೆದಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾಸಾ-1, ನನಗೆ ಮತ್ತು ಚಾಸಾ–5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿ. ಗಲಾಟೆಯನ್ನು ಬಿಡಿಸಲು ಚಾಸಾ–4 ಬಂದಾಗ ಅವರಿಗೆ ಆರೋಪಿತರು ಕೈಕಾಲುಗಳಿಂದ ಮೈಕೈಗೆ ಹೊಡೆದರು ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿ. ಜಗಳ ಬಿಡಿಸಲು ಹೋದ ನನಗೆ ಮತ್ತು ಚಾಸಾ–3 ರವರಿಗೆ ಆರೋಪಿತರು ಕೈಕಾಲುಗಳಿಂದ ಹೊಡೆದರು ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿ. ಆಗ ಚಾಸಾ–5 ಆರೋಪಿತರಿಗೆ ಛೀಮಾರಿ ಹಾಕಿ ಗಲಾಟೆ ಬಿಡಿಸಿರುತ್ತಾರೆ ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿ. ಆರೋಪಿತರು ಇನ್ನೊಂದು ಬಾರಿ ನಮ್ಮ ತಂಟೆಗೆ ಬಂದರೆ ನಿಮ್ಮ ಪ್ರಾಣ ತೆಗೆಯುತ್ತೇವೆ ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿ. ಆಗ ನನ್ನನ್ನು, ಚಾಸಾ–1 ಮತ್ತು ಚಾಸಾ–3 ರವರನ್ನು ಚಾಸಾ–5 ಒಂದು ಆಟೋದಲ್ಲಿ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿದರು ಎಂದು ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿತರ ಪರವಾಗಿ ಶ್ರೀ.ಆರ್.ಎಸ್ ವಕೀಲರಿಂದ :</u>**

1 ಮತ್ತು 3 ನೇ ಆರೋಪಿತರು ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ.